ನೋಂದಾಯಿತ ಸಂ.ಡಿಎಲ್-(ಎನ್) 007/2003-20

# ಭಾರತದ ರಾಜ್ಯಪತ್ರ

**ಸಿಜಿ-ಡಿಎಲ್-ಇ-05062020-219750**

**ಅಸಾಧಾರಣ**

**ಭಾಗ 2 – ಉಪವಿಭಾಗ 1**

**ಪ್ರಾಧಿಕೃತರಿಂದ ಪ್ರಕಟಿಸಲಾಗಿದೆ**

ಸಂ. 45 ನವದೆಹಲಿ, ಭಾನುವಾರ, ಸೆಪ್ಟೆಂಬರ್ 27, 2020/ ಆಶ್ವಯುಜ 5, 1942 (ಶಕ)

ಪ್ರತ್ಯೇಕವಾಗಿ ಸಂಕಲಿಸಿ ಕಡತಕ್ಕೆ ಹಾಕಲು ಈ ಭಾಗಕ್ಕೆ ಪ್ರತ್ಯೇಕವಾದ ಪುಟಸಂಖ್ಯೆ ನೀಡಲಾಗಿದೆ

**ಕಾನೂನು ಮತ್ತು ನ್ಯಾಯ ಸಚಿವಾಲಯ**

**(ಶಾಸನ ವಿಭಾಗ)**

*ನವದೆಹಲಿ, 27 ಸೆಪ್ಟೆಂಬರ್ 2020/ಆಶ್ವಯುಜ 5,1942 (ಶಕ)*

ಬೆಲೆ ಖಾತರಿ ಮತ್ತು ಕೃಷಿ ಸೇವೆಗಳನ್ನು ಕುರಿತಂತೆ ರೈತರ (ಸಬಲೀಕರಣ ಮತ್ತು ರಕ್ಷಣೆ) ಒಪ್ಪಂದ ಅಧಿನಿಯಮ, 2020

2020 ರ 20ನೆಯದು

[24 ಸೆಪ್ಟೆಂಬರ್, 2020]

ಕೃಷಿ-ವ್ಯವಹಾರ ಸಂಸ್ಥೆಗಳು, ಸಂಸ್ಕಾರಕರು, ಸಗಟು ಮಾರಾಟಗಾರರು, ರಫ್ತುದಾರರು ಅಥವಾ ದೊಡ್ಡ ಚಿಲ್ಲರೆ ವ್ಯಾಪಾರಿಗಳೊಂದಿಗೆ ಕೃಷಿ ಸೇವೆಗಳಿಗಾಗಿ ಮತ್ತು ಭವಿಷ್ಯದ ಕೃಷಿ ಉತ್ಪನ್ನಗಳನ್ನು ಪರಸ್ಪರ ಒಪ್ಪಿತವಾದ ಲಾಭಕರ ಬೆಲೆಯ ಚೌಕಟ್ಟಿನಲ್ಲಿ ನ್ಯಾಯಯುತ ಮತ್ತು ಪಾರದರ್ಶಕವಾದ ರೀತಿಯಲ್ಲಿ ವ್ಯವಹರಿಸುವುದಕ್ಕಾಗಿ ಮಾಡಿಕೊಳ್ಳುವ ಕೃಷಿ ಒಪ್ಪಂದಗಳಲ್ಲಿ ರೈತರನ್ನು ರಕ್ಷಿಸುವ ಮತ್ತು ಬಲಗೊಳಿಸುವ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದರ ಪರಿಣಾಮವಾದ ವಿಷಯಗಳಿಗೆ ಒಂದು ರಾಷ್ಟ್ರೀಯ ವ್ಯವಸ್ಥೆಯನ್ನು ಒದಗಿಸಲು ಅಧಿನಿಯಮ.

ಇದನ್ನು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಈ ಮುಂದಿನಂತೆ ಲೋಕಸಭೆಯು (ಪಾರ್ಲಿಮೆಂಟ್) ಶಾಸನಪಡಿಸಲಿ:-

## ಅಧ್ಯಾಯ 1
## ಪೀಠಿಕೆ

*ಸಂಕ್ಷಿಪ್ತ ಶೀರ್ಷಿಕೆ ಮತ್ತು ಆರಂಭ*

**1.** (1) ಈ ಅಧಿನಿಯಮವನ್ನು ಬೆಲೆ ಖಾತರಿ ಮತ್ತು ಕೃಷಿ ಸೇವೆಗಳನ್ನು ಕುರಿತಂತೆ ರೈತರ (ಸಬಲೀಕರಣ ಮತ್ತು ರಕ್ಷಣೆ) ಒಪ್ಪಂದ ಅಧಿನಿಯಮ, 2020 ಎಂದು ಕರೆಯಬಹುದು.

(2) ಇದು 5 ಜೂನ್ 2020 ರಿಂದ ಜಾರಿಗೆ ಬಂದಿದೆಯೆಂದು ಪರಿಗಣಿಸತಕ್ಕದ್ದು.

*ವ್ಯಾಖ್ಯೆಗಳು (Definitions)*

**2.** ಈ ಅಧಿನಿಯಮದಲ್ಲಿ, ಸಂದರ್ಭ ಬೇರೆಯಾಗಿರದಿದ್ದಲ್ಲಿ,-

(ಎ) "ಎಪಿಎಂಸಿ ಆವರಣ" ಎಂದರೆ, ಅದನ್ನು ಯಾವುದೇ ಹೆಸರಿನಿಂದ ಕರೆದಿರಲಿ, ಯಾವುದೇ ರಾಜ್ಯದ ಅಧಿನಿಯಮದಡಿ ಮಾರುಕಟ್ಟೆಗಳನ್ನು ಮತ್ತು ಕೃಷಿ ಉತ್ಪನ್ನಗಳ ವ್ಯಾಪಾರವನ್ನು ನಿಯಮನಗೊಳಿಸಲು (regulate) ಸ್ಥಾಪಿಸಲಾದ ಕೃಷಿ ಉತ್ಪನ್ನ ಮಾರಾಟ ಸಮಿತಿಯ ಭೌತಿಕ ಆವರಣ;

(ಬಿ) "ಕಂಪನಿ" ಎಂದರೆ 2013ರ ಕಂಪನಿಗಳ ಅಧಿನಿಯಮದ 2ನೇ ಪ್ರಕರಣ ಪರಿಚ್ಛೇದ (20)ರಲ್ಲಿ ವ್ಯಾಖ್ಯೆ ಮಾಡಲಾದ ಕಂಪನಿ;

(ಸಿ) "ವಿದ್ಯುನ್ಮಾನ ವ್ಯಾಪಾರ ಮತ್ತು ವಹಿವಾಟು ವೇದಿಕೆ' ಎಂದರೆ ನೇರ ಮತ್ತು ವಿದ್ಯುನ್ಮಾನ ವ್ಯವಸ್ಥೆಯ ಮೂಲಕ (online) ವಿದ್ಯುನ್ಮಾನ ಸಲಕರಣೆಗಳ ಜಾಲದ ಮೂಲಕ ಮತ್ತು ಅಂತರ್ಜಾಲ ಸೌಲಭ್ಯಗಳ (applications) ಮೂಲಕ ಕೃಷಿ ಉತ್ಪನ್ನಗಳ ವ್ಯಾಪಾರ ಮತ್ತು ವಾಣಿಜ್ಯಕ್ಕಾಗಿ ಖರೀದಿ ಮತ್ತು ಮಾರಾಟದ ಸೌಲಭ್ಯಗಳನ್ನು ಕಲ್ಪಿಸುವ ಒಂದು ವೇದಿಕೆ.

(ಡಿ) "ಕೃಷಿ ಸೇವೆಗಳು" ಬೀಜ, ಮೇವು, ಒಣ ಮೇವು, ಕೃಷಿ-ರಾಸಾಯನಿಕಗಳು, ಯಂತ್ರೋಪಕರಣಗಳು ಮತ್ತು ತಂತ್ರಜ್ಞಾನ, ಸಲಹೆ, ರಾಸಾಯನಿಕೇತರ ಕೃಷಿ ಆದಾನಗಳು ಮತ್ತು ಕೃಷಿಗಾಗಿ ಇಂಥ ಇತರ ಆದಾನಗಳನ್ನು ಒಳಗೊಳ್ಳುತ್ತದೆ;

(ಇ) "ರೈತ" ಎಂದರೆ ರೈತರ ಉತ್ಪನ್ನವನ್ನು ಸ್ವತಃ ಅಥವಾ ಗುತ್ತಿಗೆ ಕೂಲಿ ಅಥವಾ ಬೇರೆ ರೀತಿಯಲ್ಲಿ ಉತ್ಪಾದಿಸುವ ವ್ಯಕ್ತಿ, ಮತ್ತು ಇದು ಉತ್ಪಾದಕ ರೈತರ ಸಂಸ್ಥೆಯನ್ನೂ ಒಳಗೊಳ್ಳುತ್ತದೆ;

(ಎಫ್) "ಉತ್ಪಾದಕ ರೈತರ ಸಂಸ್ಥೆ" ಎಂದರೆ, ಅದನ್ನು ಯಾವ ಹೆಸರಿನಿಂದ ಕರೆಯಲಾದರೂ,

(i) ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಕಾನೂನಿನಡಿ ನೋಂದಾಯಿತವಾದ; ಅಥವಾ

(ii) ಕೇಂದ್ರ ಅಥವಾ ರಾಜ್ಯ ಸರಕಾರ ಒಂದುಂ ಯೋಜನೆ ಅಥವಾ ಕಾರ್ಯಕ್ರಮದಡಿ ಪ್ರಾಯೋಜಿಸಲಾದ - ರೈತರ ಒಂದು ಸಂಘ ಅಥವಾ ಗುಂಪು

(ಜಿ) "ಕೃಷಿ ಒಪ್ಪಂದ" ಎಂದರೆ ಒಬ್ಬ ರೈತ ಮತ್ತು ಪ್ರಾಯೋಜಕರ ನಡುವೆ, ಅಥವಾ ರೈತ, ಪ್ರಾಯೋಜಕ ಮತ್ತು ಯಾವುದೇ ಮೂರನೆಯ ಕಕ್ಷಿಯ ನಡುವೆ ಪೂರ್ವನಿಶ್ಚಿತವಾದ ಗುಣಮಟ್ಟದ ಯಾವುದೇ ಕೃಷಿ ಉತ್ಪನ್ನದ ಉತ್ಪಾದನೆ ಅಥವಾ ಕಟಾವಿಗೆ ಮುನ್ನ ರೈತನಿಂದ ಆ ಕೃಷಿ ಉತ್ಪನ್ನವನ್ನು ಕೊಳ್ಳಲು ಮತ್ತು ಕೃಷಿ ಸೇವೆಗಳನ್ನು ಒದಗಿಸಲು ಪ್ರಾಯೋಜಕರು ಸಮ್ಮತಿಸುವ ಒಂದು ಲಿಖಿತ ಒಪ್ಪಂದ.

*ವಿವರಣೆ:*- ಈ ಖಂಡದ ಉದ್ದೇಶಗಳಿಗೆ "ಕೃಷಿ ಒಪ್ಪಂದ" ಪದವು ಈ ಮುಂದಿನವನ್ನು ಒಳಗೊಳ್ಳಬಹುದು-

(i) ಉತ್ಪಾದನೆಯ ಅವಧಿಯಲ್ಲಿ ಪದಾರ್ಥದ ಸ್ವಾಮ್ಯವು ರೈತನಿಗೇ ಇರುವ ಮತ್ತು ಪ್ರಾಯೋಜಕರೊಂದಿಗಿನ ಒಪ್ಪಂದದ ನಿಬಂಧನೆಗಳ ಮೇರೆಗೆ ಅದನ್ನು ಬಟವಾಡೆ ಮಾಡಿದಾಗ ಅವನಿಗೆ ಉತ್ಪನ್ನದ ಬೆಲೆ ದೊರೆಯುವ 'ವ್ಯಾಪಾರ ಮತ್ತು ವಾಣಿಜ್ಯ ಒಪ್ಪಂದ';

(ii) ಪೂರ್ಣವಾಗಿ ಅಥವಾ ಭಾಗಶಃ ಕೃಷಿ ಸೇವೆಗಳನ್ನು ಒದಗಿಸಲು ಮತ್ತು ಅಂತಿಮ ಉತ್ಪನ್ನದ (output) ನಷ್ಟಸಂಭಾವ್ಯತೆಯನ್ನು (risk) ಭರಿಸಲು, ಆದರೆ ರೈತನು ನೀಡಿದ ಸೇವೆಗಳಿಗಾಗಿ ಅವನಿಗೆ ಪಾವತಿಮಾಡಲು ಪ್ರಾಯೋಜಕರು ಒಪ್ಪುವ 'ಉತ್ಪಾದನೆ ಒಪ್ಪಂದ';

(iii) ಇಂಥ ಇತರ ಒಪ್ಪಂದಗಳು ಮತ್ತು ಮೇಲೆ ನಿರ್ದಿಷ್ಟಪಡಿಸಿದ ಒಪ್ಪಂದಗಳ ಸಂಯೋಜನೆ

(ಎಚ್) "ಕೃಷಿ ಉತ್ಪನ್ನ" ಇವುಗಳನ್ನು ಒಳಗೊಳ್ಳುತ್ತದೆ -

(i) ಖಾದ್ಯ ಎಣ್ಣೆಬೀಜಗಳು ಮತ್ತು ಎಣ್ಣೆಗಳು, ಗೋಧಿ, ಅಕ್ಕಿ ಅಥವಾ ಇತರ ಏಕದಳಧಾನ್ಯಗಳು, ಕಿರುಧಾನ್ಯಗಳು, ಬೇಳೆಕಾಳುಗಳು, ತರಕಾರಿಗಳು, ಹಣ್ಣುಗಳು, ಕಾಯಿಗಳು, ಸಾಂಬಾರ ಪದಾರ್ಥಗಳು, ಕಬ್ಬು ಮತ್ತು ಸ್ವಾಭಾವಿಕ ಅಥವಾ ಸಂಸ್ಕರಿತ ರೂಪದಲ್ಲಿರುವ ಕೋಳಿಸಾಕಣೆ, ಕುರಿಸಾಕಣೆ, ಹಂದಿಸಾಕಣೆ ಕ್ಷೀರೋದ್ಯಮ ಮುಂತಾದವುಗಳ ಉತ್ಪನ್ನಗಳನ್ನೂ ಒಳಗೊಂಡಂತೆ ಆಹಾರ ಪದಾರ್ಥಗಳು;

(ii) ಹಿಂಡಿ ಮತ್ತು ಇತರ ಸಾರಭೂತಗಳನ್ನೂ (concentrates) ಒಳಗೊಂಡಂತೆ ಜಾನುವಾರು ಆಹಾರ; ಮತ್ತು

(iii) ಹಿಂಜಿದ ಅಥವಾ ಹಿಂಜದ ಕಚ್ಚಾ ಹತ್ತಿ;

(iv) ಹತ್ತಿ ಬೀಜಗಳು ಮತ್ತು ಕಚ್ಚಾ ಸೆಣಬು.

*1932 ರ 9*

(ಐ) 'ಸಂಸ್ಥೆ' ಎಂದರೆ 1932ರ ಭಾರತದ ಪಾಲುದಾರಿಕೆ ಅಧಿನಿಯಮದ ಪ್ರಕರಣ 4ರಲ್ಲಿ ವ್ಯಾಖ್ಯೆ ಮಾಡಲಾದ ಸಂಘ;

(ಜೆ) 'ಅನಿರೀಕ್ಷಿತ ಪರಿಸ್ಥಿತಿ' (force majeure) ಎಂದರೆ ಪ್ರವಾಹ, ಬರ, ಹವಾಮಾನ ವೈಪರೀತ್ಯ, ಭೂಕಂಪ, ಸಾಂಕ್ರಾಮಿರೋಗ, ಹುಳು-ಕೀಟಬಾಧೆ ಮತ್ತು ಅನಿವಾರ್ಯವಾದ ಮತ್ತು ಕೃಷಿ ಒಪ್ಪಂದ ಮಾಡಿಕೊಳ್ಳುವ ಕಕ್ಷಿಗಳ ನಿಯಂತ್ರಣಕ್ಕೆ ಮೀರಿದ ಇಂಥ ಇತರ ಘಟನೆಗಳನ್ನೂ ಒಳಗೊಂಡಂತೆ ಯಾವುದೇ ಅನಿರೀಕ್ಷಿತ ಬಾಹ್ಯ ಘಟನೆ;

(ಕೆ) "ಅಧಿಸೂಚನೆ" ಎಂದರೆ ಕೇಂದ್ರ ಸರಕಾರ ಅಥವಾ ರಾಜ್ಯ ಸರಕಾರಗಳು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆಗಳು; "ಅಧಿಸೂಚಿಸು" ಮತ್ತು "ಅಧಿಸೂಚಿಸಲಾಗಿದೆ" ಎಂಬ ಪದಗಳನ್ನು ಇದಕ್ಕನುಗುಣವಾಗಿ ತಿಳಿಯತಕ್ಕದ್ದು.

(ಎಲ್) "ವ್ಯಕ್ತಿ" ಇವುಗಳನ್ನು ಒಳಗೊಳ್ಳುತ್ತದೆ -

(i) ಒಬ್ಬ ವ್ಯಕ್ತಿ;

(ii) ಒಂದು ಪಾಲುದಾರಿಕೆ ಸಂಸ್ಥೆ;

(iii) ಒಂದು ಕಂಪನಿ;

(iv) ಒಂದು ಸೀಮಿತ ಹೊಣೆ ಪಾಲುದಾರಿಕೆ;

(v) ಒಂದು ಸಹಕಾರ ಸಂಘ;

(vi) ಒಂದು ಸಂಘ; ಅಥವಾ

(vii) ಕೇಂದ್ರ ಸರಕಾರ ಅಥವಾ ರಾಜ್ಯ ಸರಕಾರದ ಚಾಲ್ತಿ ಕಾರ್ಯಕ್ರಮಗಳಡಿ ರಚಿಸಲಾದ ಅಥವಾ ಮಾನ್ಯಮಾಡಲಾದ ಯಾವುದೇ ಸಂಘ ಅಥವಾ ವ್ಯಕ್ತಿಗಳ ಸಮೂಹ.

(ಎಂ) "ನಿಗದಿತ" ಎಂದರೆ ಕೇಂದ್ರಸರಕಾರವು ಈ ಅಧಿನಿಯಮದಡಿ ರಚಿಸಿದ ನಿಯಮಗಳಿಂದ ನಿಗದಿತವಾದದ್ದು.

(ಎನ್) 'ನೋಂದಾವಣೆ ಪ್ರಾಧಿಕಾರ' ಎಂದರೆ ರಾಜ್ಯ ಸರ್ಕಾರವು ಪ್ರಕರಣ 12 ರಂತೆ ಹಾಗೆಂದು ಅಧಿಸೂಚಿಸಿದ ಒಂದು ಪ್ರಾಧಿಕಾರ;

(ಒ) 'ಪ್ರಾಯೋಜಕ' ಎಂದರೆ ಕೃಷಿ ಉತ್ಪನ್ನವನ್ನು ಕೊಳ್ಳಲು ರೈತನೊಂದಿಗೆ ಒಪ್ಪಂದ ಮಾಡಿಕೊಂಡ ಒಬ್ಬ ವ್ಯಕ್ತಿ.

(ಪಿ) "ರಾಜ್ಯ" ಪದವು ಕೇಂದ್ರಾಡಳಿತ ಪ್ರದೇಶವನ್ನೂ ಒಳಗೊಳ್ಳುತ್ತದೆ;

## ಅಧ್ಯಾಯ 2
## ಕೃಷಿ ಒಪ್ಪಂದ

*ಕೃಷಿ ಒಪ್ಪಂದದ ಮತ್ತು ಅದರ ಅವಧಿ*

**3.** (1) ರೈತನೊಬ್ಬ ಯಾವುದೇ ಕೃಷಿ ಉತ್ಪನ್ನದ ಸಂಬಂಧದಲ್ಲಿ ಲಿಖಿತ ಕೃಷಿ ಒಪ್ಪಂದ ಮಾಡಿಕೊಳ್ಳಬಹುದು ಮತ್ತು ಅಂಥ ಒಪ್ಪಂದದಲ್ಲಿ-

(ಎ) ಸರಬರಾಜಿನ ಸಮಯ, ಗುಣಮಟ್ಟ, ದರ್ಜೆ, ಶಿಷ್ಟತೆಗಳು, ಬೆಲೆ ಒಳಗೊಂಡಂತೆ ಮತ್ತು ಆ ಉತ್ಪನ್ನದ ಸರಬರಾಜಿಗೆ ಸಂಬಂಧಿಸಿದ ಇತರ ವಿಷಯಗಳನ್ನು ಕುರಿತ ನಿಯಮ ನಿಬಂಧನೆಗಳು; ಮತ್ತು

(ಬಿ) ಕೃಷಿ ಸೇವೆಗಳಿಗೆ ಸಂಬಂಧಿಸಿದ ಷರತ್ತುಗಳು - ಇರಬಹುದು.

ಆದರೆ, ಇಂಥ ಕೃಷಿ ಸೇವೆಗಳನ್ನು ಒದಗಿಸಲು ಯಾವುದೇ ಕಾನೂನಿಕ ಅಗತ್ಯಗಳನ್ನು ಪಾಲಿಸುವ ಹೊಣೆಗಾರಿಕೆಯು, ಸಂದರ್ಭಕ್ಕೆ ತಕ್ಕಂತೆ, ಪ್ರಾಯೋಜಕರದು ಅಥವಾ ಕೃಷಿ ಸೇವೆ ಒದಗಿಸುವವರದ್ದಾಗಿರುತ್ತದೆ.

(2) ಈ ಪ್ರಕರಣದ ಮೇರೆಗೆ ರೈತನೊಬ್ಬನು ಬೆಳೆ ಹಂಚಿಕೆದಾರನ ಯಾವುದೇ ಹಕ್ಕುಗಳಿಗೆ ಚ್ಯುತಿಯಾಗುವಂತೆ ಕೃಷಿ ಒಪ್ಪಂದ ಮಾಡಿಕೊಳ್ಳುವಂತಿಲ್ಲ.

*ವಿವರಣೆ:-* ಈ ಉಪವಿಧಿಯ ಉದ್ದೇಶಗಳಿಗೆ 'ಬೆಳೆ ಹಂಚಿಕೆದಾರ' ಎಂದರೆ ಉಳುಮೆ ಮಾಡುವವನು ಅಥವಾ ಕೃಷಿ ಭೂಮಿಯೊಂದರಲ್ಲಿ ಒಕ್ಕಲಿರುವವನು ಕೃಷಿ ಉತ್ಪನ್ನವನ್ನು ಬೆಳೆಯುವುದಕ್ಕಾಗಿ ಅಥವಾ ಪೋಷಿಸುವುದಕ್ಕಾಗಿ ಬೆಳೆಯ ಒಂದು ಪಾಲನ್ನು ಅಥವಾ ಒಂದು ನಿಶ್ಚಿತ ಮೊತ್ತದ ಹಣವನ್ನು ಭೂಮಿಯ ಮಾಲೀಕನಿಗೆ ನೀಡಲು ಔಪಚಾರಿಕವಾಗಿ ಅಥವಾ ಅನೌಪಚಾರಿಕವಾಗಿ ಒಪ್ಪಿರುವವನು.

(3) ಕೃಷಿ ಒಪ್ಪಂದದ ಕನಿಷ್ಠ ಅವಧಿಯು, ಸಂದರ್ಭಕ್ಕೆ ತಕ್ಕಂತೆ, ಒಂದು ಬೆಳೆಯ ಅವಧಿ ಅಥವಾ ಜಾನುವಾರಿನ ಒಂದು ಉತ್ಪಾದನಾ ಚಕ್ರದ ಅವಧಿಯಾಗಿರಬೇಕು ಮತ್ತು ಗರಿಷ್ಠ ಅವಧಿಯು ಐದುವರ್ಷವಾಗಿರಬೇಕು.

ಆದರೆ, ಯಾವುದಾದರೂ ಕೃಷಿ ಉತ್ಪನ್ನದ ಉತ್ಪಾದನಾ ಚಕ್ರವು ದೀರ್ಘವಾಗಿದ್ದು ಐದು ವರ್ಷಗಳಿಗಿಂತ ಹೆಚ್ಚಾಗಬಹುದಾದಲ್ಲಿ, ಕೃಷಿ ಒಪ್ಪಂದದ ಗರಿಷ್ಠ ಅವಧಿಯನ್ನು ರೈತ ಮತ್ತು ಪ್ರಾಯೋಜಕರು ಪರಸ್ಪರವಾಗಿ ನಿರ್ಧರಿಸಿಕೊಂಡು ಕೃಷಿ ಒಪ್ಪಂದದಲ್ಲಿ ಸ್ಪಷ್ಟವಾಗಿ ತಿಳಿಸಬೇಕು.

(4) ರೈತರು ಲಿಖಿತ ಕೃಷಿ ಒಪ್ಪಂದಗಳನ್ನು ಮಾಡಿಕೊಳ್ಳಲು ಅನುವಾಗುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರವು ತನಗೆ ಯುಕ್ತವೆನಿಸಿದ ಮಾದರಿ ಕೃಷಿ ಒಪ್ಪಂದಗಳೊಂದಿಗೆ ಅಗತ್ಯವಾದ ಮಾರ್ಗದರ್ಶಿ ಸೂತ್ರಗಳನ್ನು ನೀಡಬಹುದು.

*ಕೃಷಿ ಉತ್ಪನ್ನಗಳ ಗುಣಮಟ್ಟ, ದರ್ಜೆ ಮತ್ತು ಶಿಷ್ಟತೆಗಳು*

**4.** (1) ಕೃಷಿ ಒಪ್ಪಂದ ಮಾಡಿಕೊಳ್ಳುವ ಕಕ್ಷಿಗಳು ಒಪ್ಪಂದದ ಜಾರಿಗೆ ಕೃಷಿ ಉತ್ಪನ್ನವೊಂದರ ಪರಸ್ಪರ ಒಪ್ಪಿತವಾದ ಗುಣಮಟ್ಟ ದರ್ಜೆ ಮತ್ತು ಶಿಷ್ಟತೆಗಳನ್ನು ಹೊಂದಿರಬೇಕೆಂಬ ಷರತ್ತು ವಿಧಿಸಬಹುದು.

(2) ಉಪವಿಧಿ (1) ರ ಉದ್ದೇಶಗಳಿಗಾಗಿ, ಕಕ್ಷಿಗಳು-

(ಎ) ಕೃಷಿ ಆರ್ಥಿಕತೆಯ ಆಚರಣೆಗಳು, ಕೃಷಿ ಪರಿಸರ ಮತ್ತು ಇಂಥ ಇತರ ಅಂಶಗಳಿಗೆ ಹೊಂದಿಕೆಯಾಗುವ; ಅಥವಾ

(ಬಿ) ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಯಾವುದೇ ಅಭಿಕರಣದಿಂದ (agency) ಅಥವಾ ಅಂಥ ಸರ್ಕಾರಗಳಿಂದ ಈ ಉದ್ದೇಶಕ್ಕಾಗಿ ಪ್ರಾಧಿಕರಿಸಿದ (authorised) ಸಂಸ್ಥೆಯು ರೂಪಿಸಿದ -

ಗುಣಮಟ್ಟ, ದರ್ಜೆ ಮತ್ತು ಶಿಷ್ಟತೆಗಳನ್ನು ಅಳವಡಿಸಿಕೊಳ್ಳಬಹುದು,

ಅಂಥ ಗುಣಮಟ್ಟ, ದರ್ಜೆ ಮತ್ತು ಶಿಷ್ಟತೆಗಳನ್ನು ಕೃಷಿ ಒಪ್ಪಂದದಲ್ಲಿ ಸ್ಪಷ್ಟವಾಗಿ ನಮೂದಿಸಬಹುದು.

(3) ಕೃಷಿ ಒಪ್ಪಂದದಲ್ಲಿ ಕೀಟನಾಶಕ ಶೇಷ (pesticide residue), ಆಹಾರ ಗುಣಮಟ್ಟ ಶಿಷ್ಟತೆಗಳು, ಒಳ್ಳೆಯ ಕೃಷಿ ಅಭ್ಯಾಸಗಳು ಮತ್ತು ಕಾರ್ಮಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಶಿಷ್ಟತೆಗಳನ್ನೂ ಅಳವಡಿಸಿಕೊಳ್ಳಬಹುದು.

(4) ಕೃಷಿ ಒಪ್ಪಂದ ಮಾಡಿಕೊಳ್ಳುವ ಕಕ್ಷಿಗಳಿಗೆ ಕೃಷಿ ಒಪ್ಪಂದದಲ್ಲಿ ಪರಸ್ಪರ ಒಪ್ಪಿತವಾಗುವ ಗುಣಮಟ್ಟ, ದರ್ಜೆ ಮತ್ತು ಶಿಷ್ಟತೆಗಳ ಉಸ್ತುವಾರಿ ಮತ್ತು ಸಾಗುವಳಿಯ ಅಥವಾ ಪೋಷಣೆಯ ಅವಧಿಯಲ್ಲಿ, ಅಥವಾ ಹಸ್ತಾಂತರದ ಅವಧಿಯಲ್ಲಿ ನಿಷ್ಪಕ್ಷಪಾತತೆ ಮತ್ತು ನ್ಯಾಯೋಚಿತತೆಗಾಗಿ ತಜ್ಞ ಮೌಲ್ಯಮಾಪಕರಾದ ಮೂರನೆಯ ಕಕ್ಷಿಯಿಂದ ಪ್ರಮಾಣನ ಕುರಿತ ಷರತ್ತು ಅಗತ್ಯವಾಗಬಹುದು.

*ಕೃಷಿ ಉತ್ಪನ್ನದ ಬೆಲೆ ನಿರ್ಧಾರ*

**5.** ಕೃಷಿ ಉತ್ಪನ್ನದ ಖರೀದಿಗೆ ನೀಡಬೇಕಾದ ಬೆಲೆಯನ್ನು ನಿರ್ಧರಿಸಿ ಕೃಷಿ ಒಪ್ಪಂದದಲ್ಲೇ ನಮೂದಿಸಬಹುದು, ಮತ್ತು ಒಂದು ವೇಳೆ, ಆ ಬೆಲೆಯು ಬದಲಾವಣೆಗಳಿಗೆ ಪಕ್ಕಾದಲ್ಲಿ, ಆಗ, ಅಂಥ ಒಪ್ಪಂದವು ಈ ಮುಂದಿನ ಅಂಶಗಳನ್ನು ಸ್ಪಷ್ಟವಾಗಿ ತಿಳಿಸಬೇಕು -

(ಎ) ಅಂಥ ಉತ್ಪನ್ನಕ್ಕೆ ನೀಡಬೇಕಾದ ಖಾತರಿಯಾದ ಬೆಲೆ;

(ಬಿ) ರೈತನಿಗೆ ಅತ್ಯುತ್ತಮ ಮೌಲ್ಯ ದೊರೆಯುವಂತಾಗಲು ಬೋನಸ್ ಅಥವಾ ಲಾಭಾಂಶ (bonus or premium) ಸೇರಿದಂತೆ ಖಾತರಿಯಾದ ಬೆಲೆಗಿಂತ ಅಧಿಕವಾದ ಯಾವುದೇ ಹೆಚ್ಚುವರಿ ಮೊತ್ತಕ್ಕೆ ಒಂದು ಸ್ಪಷ್ಟ ಬೆಲೆಯ ಉಲ್ಲೇಖ ಮತ್ತು ಆ ಬೆಲೆ ಉಲ್ಲೇಖವು ಎಪಿಎಂಸಿ ಆವರಣ ಅಥವಾ ವಿದ್ಯುನ್ಮಾನ ವ್ಯಾಪಾರ ಮತ್ತು ವಹಿವಾಟು ವೇದಿಕೆ ಅಥವಾ ಸಮಂಜಸವಾದ ಇತರ ಯಾವುದೇ ಮಾನದಂಡ ಬೆಲೆಗಳು;

ಆದರೆ, ಇಂಥ ಬೆಲೆಯನ್ನು ಅಥವಾ ಖಾತರಿ ಬೆಲೆಯನ್ನು ಅಥವಾ ಹೆಚ್ಚುವರಿ ಮೊತ್ತವನ್ನು ನಿರ್ಧರಿಸುವ ವಿಧಾನವನ್ನು ಕೃಷಿ ಒಪ್ಪಂದಕ್ಕೆ ಅನುಬಂಧವಾಗಿಸಿರಬೇಕು (annexed).

*ಕೃಷಿ ಉತ್ಪನ್ನದ ಖರೀದಿ ಅಥವಾ ಮಾರಾಟ*

**6**. (1) ಕೃಷಿ ಒಪ್ಪಂದದ ಮೇರೆಗೆ ಕೃಷಿ ಉತ್ಪನ್ನದ ಯಾವುದೇ ಬಟವಾಡೆಯನ್ನು -

(ಎ) ಪ್ರಾಯೋಜಕನು ಕೃಷಿ ಜಮೀನಿನ ಬಳಿ ತೆಗೆದುಕೊಳ್ಳಬೇಕಾಗಿದ್ದರೆ ಅವನು ಅಂಥ ಬಟವಾಡೆಯನ್ನು ಒಪ್ಪಿತವಾದ ಸಮಯದೊಳಗೆ ತೆಗೆದುಕೊಳ್ಳತಕ್ಕದ್ದು;

(ಬಿ) ರೈತನು ಮಾಡಬೇಕಾಗಿದ್ದರೆ, ಅಂಥ ಬಟವಾಡೆಯ ಸಕಾಲಿಕ ಸ್ವೀಕಾರಕ್ಕೆ ಎಲ್ಲ ಸಿದ್ಧತೆಗಳನ್ನೂ ಮಾಡಲಾಗಿದೆಯೆಂದು ಖಾತರಿಪಡಿಸಿಕೊಳ್ಳುವ ಹೊಣೆ ಪ್ರಾಯೋಜಕನದಾಗಿರುತ್ತದೆ.

(2) ಪ್ರಾಯೋಜಕನು, ಯಾವುದೇ ಕೃಷಿ ಉತ್ಪನ್ನದ ಬಟವಾಡೆ ಸ್ವೀಕರಿಸುವ ಮೊದಲು, ಕೃಷಿ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಲಾದಂತೆ ಆ ಉತ್ಪನ್ನದ ಗುಣಮಟ್ಟ ಅಥವಾ ಇತರ ಯಾವುದೇ ಲಕ್ಷಣವನ್ನು ಪರಿಶೀಲಿಸಬಹುದು; ಇಲ್ಲದಿದ್ದರೆ ಅವನು ಉತ್ಪನ್ನವನ್ನು ಪರಿಶೀಲಿಸಿದ್ದಾನೆಂದು ಪರಿಗಣಿಸಲಾಗುತ್ತದೆ ಮತ್ತು ಅಂಥ ಉತ್ಪನ್ನವನ್ನು ಸ್ವೀಕರಿಸದಿರಲು ಅವನಿಗೆ ಬಟವಾಡೆಯ ಸಮಯದಲ್ಲಿ ಅಥವಾ ಅಲ್ಲಿಂದ ಮುಂದೆ ಯಾವ ಹಕ್ಕೂ ಇರುತಕ್ಕದ್ದಲ್ಲ.

(3) ಪ್ರಾಯೋಜಕನು,-

(ಎ) ಕೃಷಿ ಒಪ್ಪಂದವು ಬೀಜ ಉತ್ಪಾದನೆಗೆ ಸಂಬಂಧಿಸಿದ್ದಲ್ಲಿ, ಒಪ್ಪಿತವಾದ ಮೊತ್ತದ ಮೂರನೇ ಎರಡು ಭಾಗಕ್ಕೆ ಕಡಿಮೆಯಿಲ್ಲದಷ್ಟು ಹಣವನ್ನು ಬಟವಾಡೆಯ ಸಮಯದಲ್ಲಿ ಮತ್ತು ಉಳಿದ ಹಣವನ್ನು ಸೂಕ್ತ ಪ್ರಮಾಣೀಕರಣದ ನಂತರ, ಆದರೆ ಬಟವಾಡೆಯಾದ ಮೂವತ್ತು ದಿನಗಳಿಂತ ತಡವಾಗದಂತೆ, ಪಾವತಿಮಾಡತಕ್ಕದ್ದು.

(ಬಿ) ಇತರ ಸಂದರ್ಭಗಳಲ್ಲಿ, ಒಪ್ಪಿತವಾದ ಹಣವನ್ನು ಕೃಷಿ ಉತ್ಪನ್ನದ ಬಟವಾಡೆಯನ್ನು ಸ್ವೀಕರಿಸುವ ಸಮಯದಲ್ಲಿ ಪಾವತಿ ಮಾಡಿ ಮಾರಾಟದ ಹಣದ ವಿವರಗಳನ್ನು ನಮೂದಿಸಿದ ರಸೀದಿಯೊಂದನ್ನು ನೀಡಬೇಕು.

(4) ಉಪವಿಧಿ (3) ರಂತೆ ರೈತನಿಗೆ ಮಾಡಬೇಕಾದ ಪಾವತಿಯ ವಿಧಾನ ಮತ್ತು ಕ್ರಮವನ್ನು ರಾಜ್ಯ ಸರ್ಕಾರವು ನಿಗದಿಪಡಿಸಬಹುದು.

*ಕೃಷಿ ಉತ್ಪನ್ನಗಳ ಸಂಬಂಧದಲ್ಲಿ ವಿನಾಯತಿಗಳು*

**7.** (1) ಈ ಅಧಿನಿಯಮದಡಿ ಯಾವುದೇ ಕೃಷಿ ಉತ್ಪನ್ನಕ್ಕೆ ಸಂಬಂಧಿಸಿದಂತೆ ಕೃಷಿ ಒಪ್ಪಂದ ಮಾಡಿಕೊಂಡಿದ್ದಲ್ಲಿ, ಆ ಉತ್ಪನ್ನವು ಅಂಥ ಕೃಷಿ ಉತ್ಪನ್ನದ ಮಾರಾಟ ಮತ್ತು ಖರೀದಿಯ ನಿಯಂತ್ರಣದ ಉದ್ದೇಶದಿಂದ ರಾಜ್ಯ ಸರಕಾರವು ರೂಪಿಸಿದ ಯಾವುದೇ ಅಧಿನಿಯಮದ (ಅದನ್ನು ಯಾವುದೇ ಹೆಸರಿನಿಂದ ಕರೆದಿದ್ದರೂ) ಅನ್ವಯನದಿಂದ ವಿನಾಯತಿ ಪಡೆಯುತ್ತದೆ.

*1955 ರ 10*

(2) 1955ರ ಆವಶ್ಯಕ ಪದಾರ್ಥಗಳ ಅಧಿನಿಯಮದಲ್ಲಿ ಅಥವಾ ಅದರಡಿ ಹೊರಡಿಸಲಾದ ಯಾವುದೇ ನಿಯಂತ್ರಣ ಆದೇಶದಲ್ಲಿ ಅಥವಾ ಜಾರಿಯಲ್ಲಿರುವ ಇತರ ಯಾವುದೇ ಕಾಯ್ದೆಯಲ್ಲಿ ಏನೇ ಇದ್ದರೂ, ದಾಸ್ತಾನು ಮಿತಿಗೆ (stock limit) ಸಂಬಂಧಿಸಿದ ಯಾವುದೇ ನಿರ್ಬಂಧವು ಈ ಅಧಿನಿಯಮದ ಮೇರೆಗೆ ಮಾಡಿಕೊಂಡ ಕೃಷಿ ಒಪ್ಪಂದದಡಿ ಖರೀದಿಸಲಾದ ಕೃಷಿ ಉತ್ಪನ್ನಗಳ ಪ್ರಮಾಣಕ್ಕೆ ಅನ್ವಯಿಸುವುದಿಲ್ಲ.

*ಪ್ರಾಯೋಜಕರು ಸ್ವಾಮಿತ್ವದ ಹಕ್ಕುಗಳನ್ನು ಪಡೆದುಕೊಳ್ಳಲು ಅಥವಾ ರೈತನ ಭೂಮಿ ಅಥವಾ ಆವರಣಗಳಲ್ಲಿ ಶಾಶ್ವತ ಮಾರ್ಪಾಡುಗಳನ್ನು ಮಾಡಿಕೊಳ್ಳುವುದನ್ನು ನಿಷೇಧಿಸಲಾಗಿದೆ*

**8.** ಈ ಮುಂದಿನ ಉದ್ದೇಶಗಳಿಗೆ ಕೃಷಿ ಒಪ್ಪಂದ ಮಾಡಿಕೊಳ್ಳುವಂತಿಲ್ಲ-

(ಎ) ಮಾರಾಟ, ಗುತ್ತಿಗೆ ಮತ್ತು ಅಡಮಾನವೂ ಸೇರಿದಂತೆ ರೈತನ ಭೂಮಿಯ ಅಥವಾ ಆವರಣದ ಯಾವುದೇ ವರ್ಗಾವಣೆ; ಅಥವಾ

(ಬಿ) ಒಪ್ಪಂದದ ಅವಧಿ ಮುಗಿದಾಗ ಪ್ರಾಯೋಜಕನು ತನ್ನ ಖರ್ಚಿನಲ್ಲಿ ಅಂಥ ಕಟ್ಟಡ/ರಚನೆಯನ್ನು ತೆಗೆದುಹಾಕಲು ಅಥವಾ ಭೂಮಿಯನ್ನು ಮೊದಲಿನ ಸ್ಥಿತಿಗೆ ತರಲು ಒಪ್ಪದಿದ್ದರೆ, ರೈತನ ಭೂಮಿಯ ಅಥವಾ ಆವರಣದ ಮೇಲೆ,ಯಾವುದೇ ಶಾಶ್ವತ ರಚನೆಯ ನಿರ್ಮಾಣ ಅಥವಾ ಯಾವುದೇ ಮಾರ್ಪಾಡು (modification).

ಆದರೆ, ಒಪ್ಪಿಗೆಯಂತೆ ಪ್ರಾಯೋಜಕನು ಅಂಥ ಕಟ್ಟಡ/ರಚನೆಯನ್ನು ತೆಗೆದುಹಾಕದಿದ್ದರೆ ಒಪ್ಪಂದ ಮುಕ್ತಾಯವಾದ ಮೇಲೆ ಅಥವಾ ಒಪ್ಪಂದದ ಅವಧಿ ಮುಗಿದ ಮೇಲೆ ಆ ಕಟ್ಟಡದ ಸ್ವಾಮ್ಯವು ರೈತನದಾಗಿರುತ್ತದೆ.

*ಒಪ್ಪಂದವನ್ನು ವಿಮೆ ಅಥವಾ ಉದ್ದರಿಗೆ (credit) ಸಂಬಂಧ ಕಲ್ಪಿಸುವುದು (linkage)*

**9.** ನಷ್ಟ ಸಂಭಾವ್ಯತೆಯನ್ನು ತಗ್ಗಿಸಲು ಮತ್ತು ರೈತ ಅಥವಾ ಪ್ರಾಯೋಜಕ ಅಥವಾ ಇಬ್ಬರಿಗೂ ಉದ್ದರಿ (credit) ಒದಗಿಸಲು ಕೃಷಿ ಒಪ್ಪಂದವನ್ನು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಯಾವುದೇ ಹಣಕಾಸು ಸೇವಾ ಸಂಸ್ಥೆಯ ವಿಮೆ ಅಥವಾ ಉದ್ದರಿ ಸಂಲೇಖದೊಂದಿಗೆ (credit instrument) ಸಂಬಂಧ ಕಲ್ಪಿಸಬಹುದು (linked).

*ಕೃಷಿ ಒಪ್ಪಂದದ ಇತರ ಕಕ್ಷಿಗಳು*

**10.** ಅಧಿನಿಯಮದಲ್ಲಿ ಬೇರೆರೀತಿಯಾಗಿರದಿದ್ದರೆ, ಒಬ್ಬ ಸಂಯೋಜಕ (aggregator) ಅಥವಾ ಕೃಷಿ ಸೇವೆ ಒದಗಿಸುವ ವ್ಯಕ್ತಿಯು ಕೃಷಿ ಒಪ್ಪಂದಕ್ಕೆ ಕಕ್ಷಿಯಾಗಬಹುದು; ಅಂಥ ಸಂದರ್ಭದಲ್ಲಿ ಸಂಯೋಜಕ (aggregator) ಅಥವಾ ಕೃಷಿ ಸೇವೆ ಒದಗಿಸುವ ವ್ಯಕ್ತಿಯು ಸಂಯೋಜಕ (aggregator) ಅಥವಾ ಕೃಷಿ ಸೇವೆ ಒದಗಿಸುವ ವ್ಯಕ್ತಿಯ ಪಾತ್ರ ಮತ್ತು ಸೇವೆಗಳನ್ನು ಕುರಿತು ಆ ಕೃಷಿ ಒಪ್ಪಂದದಲ್ಲಿ ಸ್ಪಷ್ಟವಾಗಿ ತಿಳಿಸಬೇಕು.

*ವಿವರಣೆ.*- ಈ ಪ್ರಕರಣದ ಉದ್ದೇಶಗಳಿಗೆ,-

(i) "ಸಂಯೋಜಕ" (aggregator) ಎಂದರೆ ರೈತ ಉತ್ಪನ್ನ ಸಂಸ್ಥೆಯನ್ನೂ ಒಳಗೊಂಡಂತೆ, ರೈತ ಅಥವಾ ರೈತರ ಗುಂಪಿನ ಮತ್ತು ಪ್ರಾಯೋಜಕರ ನಡುವೆ ಮಧ್ಯಸ್ಥಗಾರನಾಗಿ ಕೆಲಸಮಾಡುವ ಹಾಗೂ ರೈತರು ಮತ್ತು ಪ್ರಾಯೋಜಕರಿಬ್ಬರಿಗೂ ಸಂಯೋಜನೆಗೆ ಸಂಬಂಧಿಸಿದ ಸೇವೆಗಳನ್ನೂದಗಿಸುವ ಯಾವುದೇ ವ್ಯಕ್ತಿ;

(ii) "ಕೃಷಿ ಸೇವೆ ಒದಗಿಸುವವ" ಎಂದರೆ ಕೃಷಿ ಸೇವೆಗಳನ್ನು ಒದಗಿಸುವ ಯಾವುದೇ ವ್ಯಕ್ತಿ.

*ಕೃಷಿ ಒಪ್ಪಂದದ ಬದಲಾವಣೆ ಅಥವಾ ಮುಕ್ತಾಯ*

**11.** ಕೃಷಿ ಒಪ್ಪಂದ ಮಾಡಿಕೊಂಡ ಮೇಲೆ ಯಾವಾಗಲಾದರೂ, ಅಂಥ ಒಪ್ಪಂದದ ಕಕ್ಷಿಗಳು ಪರಸ್ಪರ ಒಪ್ಪಿಗೆಯ ಮೇರೆಗೆ ಯಾವುದೇ ಸಮಂಜಸ ಕಾರಣಕ್ಕಾಗಿ ಆ ಒಪ್ಪಂದವನ್ನು ಮಾರ್ಪಡಿಸಬಹುದು ಅಥವಾ ಅಂತ್ಯಗೊಳಿಸಬಹುದು.

*ನೋಂದಾವಣೆ ಪ್ರಾಧಿಕಾರದ ಸ್ಥಾಪನೆ*

**12.** (1) ರಾಜ್ಯ ಸರ್ಕಾರವೊಂದು ಕೃಷಿ ಒಪ್ಪಂದಗಳ ನೋಂದಾವಣೆಗೆ ವಿದ್ಯುನ್ಮಾನ ನೋಂದಾವಣೆ ದಾಖಲೆ ವ್ಯವಸ್ಥೆಯನ್ನೊದಗಿಸಲು ಆ ರಾಜ್ಯಕ್ಕೆ ಒಂದು ನೋಂದಾವಣೆ ಪ್ರಾಧಿಕಾರವನ್ನು ಅಧಿಸೂಚಿಸಬಹುದು.

(2) ನೋಂದಾವಣೆ ಪ್ರಾಧಿಕಾರದ ಸ್ಥಾಪನೆ, ಸಂರಚನೆ, ಅಧಿಕಾರಗಳು ಮತ್ತು ಕಾರ್ಯಭಾರಗಳು (functions) ಮತ್ತು ನೋಂದಾವಣೆಯ ವಿಧಾನವು ರಾಜ್ಯ ಸರ್ಕಾರವು ನಿಗದಿ ಪಡಿಸಿದ ರೀತಿಯಲ್ಲಿರುತ್ತದೆ.

## ಅಧ್ಯಾಯ 3
## ವಿವಾದ ಇತ್ಯರ್ಥ

*ವಿವಾದಗಳ ಇತ್ಯರ್ಥಕ್ಕೆ ಸಮನ್ವಯನ ಮಂಡಲಿ*

**13.** (1) ಪ್ರತಿಯೊಂದು ಕೃಷಿ ಒಪ್ಪಂದವೂ ಸಂಧಾನ ಪ್ರಕ್ರಿಯೆಗೆ ಮತ್ತು ಒಪ್ಪಂದದ ಕಕ್ಷಿಗಳ ಪ್ರತಿನಿಧಿಗಳನ್ನೊಳಗೊಂಡ ಸಮನ್ವಯನ ಮಂಡಲಿಯ ರಚನೆಗೆ ಸ್ಪಷ್ಟವಾಗಿ ಅವಕಾಶ ಕಲ್ಪಿಸತಕ್ಕದ್ದು;

ಆದರೆ, ಸಮನ್ವಯನ ಮಂಡಲಿಯಲ್ಲಿ ಕಕ್ಷಿಗಳ ಆ ಪ್ರಾತಿನಿಧ್ಯವು ನ್ಯಾಯಯುತ ಮತ್ತು ಸಂತುಲಿತವಾಗಿರಬೇಕು.

(2) ಯಾವುದೇ ಕೃಷಿ ಒಪ್ಪಂದದಲ್ಲಿ ಉಂಟಾದ ವಿವಾದವನ್ನು ಮೊದಲು ಕೃಷಿ ಒಪ್ಪಂದದ ನಿಯಮಗಳಂತೆ ರಚಿಸಿದ ಸಮನ್ವಯನ ಮಂಡಲಿಗೆ ಒಪ್ಪಿಸತಕ್ಕದ್ದು ಮತ್ತು ಆ ವಿವಾದವನ್ನು ಇತ್ಯರ್ಥ ಮಾಡಲು ಮಂಡಲಿಯು ಎಲ್ಲ ಪ್ರಯತ್ನಗಳನ್ನೂ ಮಾಡತಕ್ಕದ್ದು.

(3) ಯಾವುದೇ ವಿವಾದದ ವಿಷಯದಲ್ಲಿ, ಸಂಧಾನ ನಡಾವಳಿಯ ಮೂಲಕ ಇತ್ಯರ್ಥವಾದರೆ ಅದರಂತೆ ಒಂದು ಇತ್ಯರ್ಥದ ಜ್ಞಾಪನಪತ್ರವನ್ನು (Memorandum of settlement) ರಚಿಸಿ ಆ ವಿವಾದದ ಎಲ್ಲ ಕಕ್ಷಿಗಳೂ ಸಹಿ ಮಾಡತಕ್ಕದ್ದು ಮತ್ತು ಅಂಥ ಜ್ಞಾಪನ ಪತ್ರವು ಎಲ್ಲ ಕಕ್ಷಿಗಳಿಗೂ ಬಂಧಕವಾಗಿರುತ್ತದೆ (binding).

*ವಿವಾದಗಳ ಪರಿಹಾರಕ್ಕೆ ವಿಧಾನ (Mechanism for dispute resolution)*

**14.** (1) ಪ್ರಕರಣ 13 ರ ಉಪವಿಧಿ (1) ರಡಿ ಅಗತ್ಯವಾದಂತೆ ಕೃಷಿ ಒಪ್ಪಂದವು ಸಂಧಾನ ಪ್ರಕ್ರಿಯೆಗೆ ಅವಕಾಶ ಮಾಡಿಕೊಡದಿರುವೆಡೆಯಲ್ಲಿ, ಅಥವಾ ಕೃಷಿ ಒಪ್ಪಂದದ ಕಕ್ಷಿಗಳು ಆ ಪ್ರಕರಣದ ಮೇರೆಗೆ ತಮ್ಮ ವಿವಾದವನ್ನು ಮೂವತ್ತು ದಿನಗಳೊಳಗಾಗಿ ಬಗೆಹರಿಸಿಕೊಳ್ಳಲು ವಿಫಲರಾದಲ್ಲಿ, ಆಗ, ಅಂಥ ಯಾವುದೇ ಕಕ್ಷಿಯು ಕೃಷಿ ಒಪ್ಪಂದಗಳಿಗೆ ಸಂಬಂಧಿಸಿದ ವಿವಾದಗಳನ್ನು ಕುರಿತು ತೀರ್ಮಾನಿಸಲು ಉಪ-ವಿಭಾಗೀಯ ಪ್ರಾಧಿಕಾರಿಯಾಗತಕ್ಕ ಸಂಬಂಧಿಸಿದ ಉಪ-ವಿಭಾಗೀಯ ಮ್ಯಾಜಿಸ್ಟ್ರೇಟ್ ಅವರಲ್ಲಿಗೆ ಹೋಗಬಹುದು.

(2) ಉಪವಿಧಿ (1) ರ ಮೇರೆಗೆ ವಿವಾದವನ್ನು ಸ್ವೀಕರಿಸಿದಾಗ, ಉಪ-ವಿಭಾಗೀಯ ಪ್ರಾಧಿಕಾರಿಯು, -

(ಎ) ಕೃಷಿ ಒಪ್ಪಂದವು ಸಂಧಾನ ಪ್ರಕ್ರಿಯೆಗೆ ಅವಕಾಶ ಕಲ್ಪಿಸದಿದ್ದಲ್ಲಿ, ಅಂಥ ವಿವಾದವನ್ನು ಇತ್ಯರ್ಥಪಡಿಸಲು ಸಮನ್ವಯನ ಮಂಡಲಿಯೊಂದನ್ನು ರಚಿಸಬಹುದು; ಅಥವಾ

(ಬಿ) ಕಕ್ಷಿಗಳ ವಾದಗಳನ್ನು ಮಂಡಿಸಲು ಸಮಂಜಸ ಅವಕಾಶ ನೀಡಿದ ಮೇಲೆ ಕಕ್ಷಿಗಳು ಸಂಧಾನ ಪ್ರಕ್ರಿಯೆಯ ಮೂಲಕ ಅಂಥ ವಿವಾದವನ್ನು ಸ್ವೀಕರಿಸಿದ ಮೂವತ್ತು ದಿನಗಳೊಳಗೆ ವಿವಾದವನ್ನು ಸಾರಾಂಶ ರೂಪದಲ್ಲಿ (summary manner) ನಿರ್ಣಯಿಸಿಕೊಳ್ಳಲು ವಿಫಲರಾದಾಗ, ಈ ಮುಂದಿನ ಷರತ್ತುಗಳ ಮೇರೆಗೆ, ಯಥೋಚಿತವಾದ ದಂಡ ಮತ್ತು ಬಡ್ಡಿಯೊಂದಿಗೆ ವಿವಾದದಲ್ಲಿರುವ ಮೊತ್ತದ ವಸೂಲಿಗೆ ಆದೇಶ ಹೊರಡಿಸಬಹುದು:-

(i) ಪ್ರಾಯೋಜಕನು ರೈತನಿಗೆ ಮಾಡಬೇಕಾದ ಪಾವತಿಗೆ ತಪ್ಪಿದರೆ, ಅಂಥ ದಂಡವು ಬಾಕಿಯಾದ ಮೊತ್ತದ ಒಂದೂವರೆಯಷ್ಟರ ವರೆಗೆ ವಿಸ್ತರಿಸಬಹುದು;

(ii) ಕೃಷಿ ಒಪ್ಪಂದದ ನಿಯಮಗಳಂತೆ ಯಾವುದೇ ಮುಂಗಡ ಹಣ ಪಾವತಿ ಅಥವಾ ಆದಾನಗಳ ವೆಚ್ಚದ ಕಾರಣದಿಂದ ಆದೇಶವು ಪ್ರಾಯೋಜಕನಿಗೆ ಬರಬೇಕಾದ ಬಾಕಿಯ ವಸೂಲಿಗಾಗಿ ರೈತನ ವಿರುದ್ಧವಾಗಿದ್ದಲ್ಲಿ, ಅಂಥ ಮೊಬಲಗು ಪ್ರಾಯೋಜಕನು ವಾಸ್ತವವಾಗಿ ಮಾಡಿದ ವೆಚ್ಚಕ್ಕಿಂತ ಹೆಚ್ಚಾಗಿರಬಾರದು;

(iii) ವಿವಾದಿತ ಕೃಷಿ ಒಪ್ಪಂದವು ಸುಗ್ರೀವಾಜ್ಞೆಯ ಉಪಬಂಧಗಳಿಗೆ ವಿರುದ್ಧವಾಗಿದ್ದಾಗ, ಅಥವಾ ರೈತನು ನೀಡಬೇಕಾದ ಬಾಕಿಯು ಅನಿರೀಕ್ಷಿತ ಪರಿಸ್ಥಿತಿಗಳ (force majeure) ಪರಿಣಾಮವಾಗಿದ್ದರೆ, ರೈತನ ವಿರುದ್ಧ ವಸೂಲಾತಿ ಆದೇಶ ಹೊರಡಿಸುವಂತಿಲ್ಲ.

*1908 ರ 5*

(3) ಈ ಪ್ರಕರಣದ ಮೇರೆಗೆ ಉಪ-ವಿಭಾಗೀಯ ಅಧಿಕಾರಿಯು ನೀಡಿದ ಪ್ರತಿಯೊಂದು ಆದೇಶವೂ ಸತ್ರ ನ್ಯಾಯಾಲಯದ ತೀರ್ಪಿನಂತೆ (decree of a civil court) ಶಕ್ತವಾಗಿರುತ್ತದೆ ಮತ್ತು, ಉಪವಿಧಿ (4) ರಡಿ ಮೇಲ್ಮನವಿ ಸಲ್ಲಿಸದಿದ್ದರೆ, 1908ರ ಪ್ರಕ್ರಿಯಾ ಸಂಹಿತೆಯಡಿಯಲ್ಲಿನ ಡಿಕ್ರಿಯಂತೆಯೇ ಜಾರಿಗೊಳಿಸಬಹುದಾಗಿರುತ್ತದೆ.

(4) ಉಪ-ವಿಭಾಗೀಯ ಅಧಿಕಾರಿಯ ಆದೇಶವೊಂದರಿಂದ ನೊಂದ ಯಾವುದೇ ಕಕ್ಷಿಯು ಅಂಥ ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸಂಗ್ರಾಹಕರು ಅಥವಾ ಅವರಿಂದ ನಾಮನಿರ್ದೇಶಿತರಾದ ಹೆಚ್ಚುವರಿ ಸಂಗ್ರಾಹಕರು ಅಧ್ಯಕ್ಷರಾಗಿರುವ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಬಹುದು.

(5) ಮೇಲ್ಮನವಿ ಪ್ರಾಧಿಕಾರವು ಮೇಲ್ಮನವಿಯನ್ನು ಮೂವತ್ತು ದಿನಗಳಲ್ಲಿ ವಿಲೇ ಮಾಡತಕ್ಕದ್ದು.

*1908 ರ 5*

(6) ಈ ಪ್ರಕರಣದ ಮೇರೆಗೆ ಮೇಲ್ಮನವಿ ಪ್ರಾಧಿಕಾರ ನೀಡಿದ ಪ್ರತಿಯೊಂದು ಆದೇಶವೂ ಸತ್ರ ನ್ಯಾಯಾಲಯದ ತೀರ್ಪಿನಂತೆಯೇ (decree of a civil court) ಶಕ್ತವಾಗಿರುತ್ತದೆ ಮತ್ತು 1908ರ ಪ್ರಕ್ರಿಯಾ ಸಂಹಿತೆಯಡಿಯಲ್ಲಿನ ಡಿಕ್ರಿಯಂತೆಯೇ ಜಾರಿಗೊಳಿಸಬಹುದಾಗಿರುತ್ತದೆ.

(7) ಸಂದರ್ಭಕ್ಕೆ ತಕ್ಕಂತೆ, ಉಪ-ವಿಭಾಗೀಯ ಅಧಿಕಾರಿ ಅಥವಾ ಮೇಲ್ಮನವಿ ಪ್ರಾಧಿಕಾರಿಯು ಹೊರಡಿಸಿದ ಯಾವುದೇ ಆದೇಶದಂತೆ ಪಾವತಿಯುಕ್ತವಾಗುವ ಮೊತ್ತವನ್ನು ಭೂಕಂದಾಯದ ಬಾಕಿಯಂತೆ ವಸೂಲು ಮಾಡಬಹುದು.

(8) ಈ ಪ್ರಕರಣದ ಮೇರೆಗೆ ವಿವಾದಗಳನ್ನು ನಿರ್ಣಯಿಸುವಾಗ ಉಪ-ವಿಭಾಗೀಯ ಪ್ರಾಧಿಕಾರಿ ಅಥವಾ ಮೇಲ್ಮನವಿ ಪ್ರಾಧಿಕಾರಿಯು ಸಾಕ್ಷ್ಯಾಧಾರಗಳ ಸ್ವೀಕಾರ, ಸಾಕ್ಷಿಗಳ ಹಾಜರಾತಿಯ ಏರ್ಪಾಡು, ದಸ್ತಾವೇಜುಗಳ ಮತ್ತು ಭೌತಿಕ ವಸ್ತುಗಳ ಅನ್ವೇಷಣೆ ಮತ್ತು

ಪ್ರಸ್ತುತಿಗೆ ಒತ್ತಾಯ ಮತ್ತು ಕೇಂದ್ರ ಸರ್ಕಾರವು ನಿಗದಿಪಡಿಸುವ ಇಂಥ ಇತರ ಉದ್ದೇಶಗಳಿಗೆ ಸಂಬಂಧಿಸಿದಂತೆ ಸತ್ರ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನು ಹೊಂದಿರುತ್ತಾರೆ.

(9) ಉಪ-ವಿಭಾಗೀಯ ಪ್ರಾಧಿಕಾರಿಯಲ್ಲಿ ಮನವಿಯನ್ನು ಮತ್ತು ಮೇಲ್ಮನವಿ ಪ್ರಾಧಿಕಾರದಲ್ಲಿ ಮೇಲ್ಮನವಿಯನ್ನು ಸಲ್ಲಿಸುವ ರೀತಿ ಮತ್ತು ವಿಧಾನವು ಕೇಂದ್ರ ಸರಕಾರವು ನಿಗದಿ ಪಡಿಸಿದಂತೆ ಇರತಕ್ಕದ್ದು.

ಬಾಕಿಗಳ ವಸೂಲಾತಿಗಾಗಿ ರೈತನ ಭೂಮಿಯ ಮೇಲೆ ಕ್ರಮವಿಲ್ಲ

**15.** ಪ್ರಕರಣ 14ರಲ್ಲಿರುವುದೇನೇ ಇರಲಿ, ಆ ಪ್ರಕರಣದಡಿ ನೀಡಿದ ಆದೇಶದ ಮೇರೆಗೆ ಯಾವುದೇ ಬಾಕಿಯ ವಸೂಲಿಗಾಗಿ ರೈತನ ಕೃಷಿ ಭೂಮಿಯ ಮೇಲೆ ಯಾವ ಕ್ರಮವನ್ನೂ ಕೈಗೊಳ್ಳುವಂತಿಲ್ಲ..

## ಅಧ್ಯಾಯ 4
## ವಿವಿಧ ವಿಷಯಗಳು

*ನಿರ್ದೇಶಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ*

**16.** ಈ ಸುಗ್ರೀವಾಜ್ಞೆಯ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕೇಂದ್ರ ಸರ್ಕಾರವು ರಾಜ್ಯಸರ್ಕಾರಗಳಿಗೆ ಕಾಲಕಾಲಕ್ಕೆ, ತಾನು ಅಗತ್ಯವೆಂದು ಪರಿಗಣಿಸಿದ, ನಿರ್ದೇಶಗಳನ್ನು ನೀಡಬಹುದು ಮತ್ತು ರಾಜ್ಯ ಸರಕಾರಗಳು ಆ ನಿರ್ದೇಶಗಳನ್ನು ಪಾಲಿಸಬೇಕು.

*ಅಧಿನಿಯಮದಡಿ ಅಧಿಕಾರಿಗಳು ಸಾರ್ವಜನಿಕ ಸೇವಕರು (1860ರ 45)*

**17.** ನೋಂದಾವಣೆ ಪ್ರಾಧಿಕಾರಿ, ಉಪ-ವಿಭಾಗೀಯ ಪ್ರಾಧಿಕಾರ ಮತ್ತು ಮೇಲ್ಮನವಿ ಪ್ರಾಧಿಕಾರಿ ಸೇರಿದಂತೆ ಈ *ಅಧಿನಿಯಮದಡಿ* ರಚಿಸಲಾದ ಅಥವಾ ನಿಗದಿಪಡಿಸಲಾದ ಎಲ್ಲ ಪ್ರಾಧಿಕಾರಿಗಳೂ ಭಾರತದ ದಂಡ ಸಂಹಿತೆಯ 21ನೇ ಪ್ರಕರಣದಲ್ಲಿ ಹೇಳಿದಂತೆ ಸಾರ್ವಜನಿಕ ಸೇವಕರೆಂದು ಪರಿಗಣಿತರಾಗುತ್ತಾರೆ.

*ಸದ್ಭಾವನೆಯಿಂದ ತೆಗೆದುಕೊಂಡ ಕ್ರಮಕ್ಕೆ ರಕ್ಷಣೆ*

**18.** ಈ *ಅಧಿನಿಯಮದಡಿ* ಅಥವಾ ಅದರಡಿ ಮಾಡಲಾದ ನಿಯಮಗಳು ಅಥವಾ ಆದೇಶಗಳಡಿ ಸದ್ಭಾವನೆಯಿಂದ ಮಾಡಿದ, ಮಾಡಬೇಕೆಂದು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ನೋಂದಾವಣೆ ಪ್ರಾಧಿಕಾರ, ಉಪ-ವಿಭಾಗೀಯ ಅಧಿಕಾರಿ, ಮೇಲ್ಮನವಿ ಪ್ರಾಧಿಕಾರ ಅಥವಾ ಇತರ ಯಾವುದೇ ವ್ಯಕ್ತಿಯ ವಿರುದ್ಧ ದಾವೆ, ಫಿರ್ಯಾದು ಅಥವಾ ಇತರ ಕಾನೂನಿಕ ಕ್ರಮ ಹೂಡುವಂತಿಲ್ಲ.

*ಸತ್ರ ನ್ಯಾಯಾಲಯಗಳ (civil courts) ವ್ಯಾಪ್ತಿಗೆ ಬರುವುದಿಲ್ಲ*

**19.** ಈ ಅಧಿನಿಯಮದಡಿ ಪ್ರಾಪ್ತವಾದ ಅಧಿಕಾರವುಳ್ಳ ಉಪ-ವಿಭಾಗೀಯ ಅಧಿಕಾರಿ ಅಥವಾ ಮೇಲ್ಮನವಿ ಪ್ರಾಧಿಕಾರಿ ತೀರ್ಮಾನಿಸಬಹುದಾದಹುದಾದ ವಿವಾದ ಕುರಿತಂತೆ ದಾವೆ ಅಥವಾ ಕಾನೂನಿಕ ಕ್ರಮವನ್ನು ಅನುಮತಿಸಲು ಯಾವುದೇ ಸತ್ರ ನ್ಯಾಯಾಲಯಕ್ಕೆ ವ್ಯಾಪ್ತಿಯಿರುವುದಿಲ್ಲ ಮತ್ತು ಈ ಅಧಿನಿಯಮದಡಿ *ಅ*ಅಥವಾ ಅದರಡಿ ಮಾಡಲಾದ ನಿಯಮಗಳಂತೆ ನೀಡಲಾದ ಅಧಿಕಾರದಂತೆ ಕೈಗೊಳ್ಳಲಾದ ಯಾವುದೇ ಕ್ರಮಕ್ಕೂ ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರವು ಪ್ರತಿಬಂಧಕಾಜ್ಞೆ (injunction) ವಿಧಿಸುವಂತಿಲ್ಲ.

*ಅಧಿನಿಯಮಕ್ಕೆ ಅತಿರಿಕ್ತ ಪರಿಣಾಮವಿರುತ್ತದೆ (overriding effect)*

**20.** ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನು ಅಥವಾ ಜಾರಿಯಲ್ಲಿರುವ, ಈ ಸುಗ್ರೀವಾಜ್ಞೆಯಲ್ಲದೆ ಇತರ ಕಾನೂನಿನ ಬಲ ಹೊಂದಿದ ಯಾವುದೇ ಸಂಲೇಖ- ಇವುಗಳಲ್ಲಿರುವುದಕ್ಕೆ ಹೊಂದುವಂತಿರದಿದ್ದರೂ ಈ ಅಧಿನಿಯಮದ ಉಪಬಂಧಗಳು ಅತಿರಿಕ್ತ ಪರಿಣಾಮ ಹೊಂದಿರುತ್ತವೆ;

ಆದರೆ, ಈ ಅಧಿನಿಯಮವು ಜಾರಿಗೆ ಬರುವ ಮುನ್ನ ಸದ್ಯ ಜಾರಿಯಲ್ಲಿರುವ ರಾಜ್ಯದ ಯಾವುದೇ ಕಾನೂನು ಅಥವಾ ಅದರಡಿ ಯಾವುದೇ ನಿಯಮಗಳಂತೆ ಮಾಡಿಕೊಂಡ ಕೃಷಿ ಒಪ್ಪಂದ ಅಥವಾ ಇಂಥ ಕರಾರು ಅಂಥ ಒಪ್ಪಂದ ಅಥವಾ ಕರಾರಿನ ಅವಧಿ ಮುಗಿಯುವ ವರೆಗೂ ಸಮ್ಮತವಾಗಿರುತ್ತದೆ.

*ಅಧಿನಿಯಮವು ಷೇರು ವಿನಿಮಯ ಕೇಂದ್ರ ಮತ್ತು ತೀರುವಳಿ ಪಾಲಿಕೆಗಳಿಗೆ (clearing corporation) ಅನ್ವಯಿಸುವುದಿಲ್ಲ (1960 ರ 42)*

**21.** ಈ ಅಧಿನಿಯಮದಲ್ಲಿರುವ ಯಾವುದೇ ಅಂಶವು 1956 ರ ಪ್ರತಿಭೂತಿ ಕರಾರುಗಳ (ನಿಯಮನ) ಅಧಿನಿಯಮದಡಿ ಮಾನ್ಯವಾದ (Securities Contracts (Regulation) Act) ಷೇರು ವಿನಿಮಯ ಕೇಂದ್ರಗಳು ಮತ್ತು ತೀರುವಳಿ ಪಾಲಿಕೆ (clearing corporation) ಅಥವಾ ಅದರಡಿ ನಡೆಸಲಾದ ವಹಿವಾಟುಗಳಿಗೆ ಅನ್ವಯವಾಗುವುದಿಲ್ಲ.

*ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ*

**22.** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರಲು ಕೇಂದ್ರ ಸರ್ಕಾರವು, ಅಧಿಸೂಚನೆಗಳ ಮೂಲಕ, ನಿಯಮಗಳನ್ನು ರಚಿಸಬಹುದು.

(2) ನಿರ್ದಿಷ್ಟವಾಗಿ ಮತ್ತು ಮೇಲೆ ಹೇಳಿದ ಅಧಿಕಾರಗಳ ಸಾಮಾನ್ಯತ್ವಕ್ಕೆ ಧಕ್ಕೆಯಿಲ್ಲದಂತೆ, ಈ ನಿಯಮಗಳು ಈ ಮುಂದಿನವುಗಳಲ್ಲಿ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಅವಕಾಶ ಮಾಡಿಕೊಡಬಹುದು:-

(ಎ) ಪ್ರಕರಣ 14 ರ ಉಪವಿಧಿ (8) ರಂತೆ ಉಪ-ವಿಭಾಗೀಯ ಅಧಿಕಾರಿ ಅಥವಾ ಮೇಲ್ಮನವಿ ಪ್ರಾಧಿಕಾರಕ್ಕೆ ಸತ್ರ ನ್ಯಾಯಾಲಯದ ಅಧಿಕಾರವಿರುತ್ತದೆ;

(ಬಿ) ಪ್ರಕರಣ 14 ರ ಉಪವಿಧಿ (9) ರಂತೆ ಉಪ-ವಿಭಾಗೀಯ ಪ್ರಾಧಿಕಾರದಲ್ಲಿ ಮನವಿಯೊಂದನ್ನು ಸಲ್ಲಿಸುವ ಮತ್ತು ಮೇಲ್ಮನವಿ ಪ್ರಾಧಿಕಾರದಲ್ಲಿ ಮೇಲ್ಮನವಿಯನ್ನು ಸಲ್ಲಿಸುವ ರೀತಿ ಮತ್ತು ವಿಧಾನ;

(ಸಿ) ನಿಗದಿ ಮಾಡಬೇಕಾದ ಅಥವಾ ಮಾಡಬಹುದಾದ ಅಥವಾ ಕೇಂದ್ರ ಸರಕಾರಗಳ ನಿಯಮಗಳ ಮೂಲಕ, ಉಪಬಂಧ ಮಾಡಬೇಕಾದ ಇತರ ಯಾವುದೇ ವಿಷಯ.

(3) ಕೇಂದ್ರ ಈ ಅಧಿನಿಯಮದಡಿ ರಚಿಸಿದ ಪ್ರತಿಯೊಂದು ನಿಯಮವನ್ನೂ, ಅದನ್ನು ರಚಿಸಿದ ಮೇಲೆ ಕೂಡಲೇ ಶಾಸನ ಸಭೆಯ (Parliament) ಎರಡೂ ಸದನಗಳಲ್ಲಿ, ಅಧಿವೇಶನ ನಡೆಯುತ್ತಿದ್ದಾಗ, ಒಂದು ಅಥವಾ ಅನುಕ್ರಮದ ಎರಡು ಅಧಿವೇಶನಗಳಲ್ಲಿ ಒಟ್ಟು ಮೂವತ್ತು ದಿನಗಳ ಅವಧಿಯಲ್ಲಿ ಮಂಡಿಸತಕ್ಕದ್ದು, ಮತ್ತು ಅಧಿವೇಶನ ಅಥವಾ ಅನುಕ್ರಮದ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ನಿಯಮದಲ್ಲಿ ಯಾವುದಾದರೂ ಮಾರ್ಪಾಡು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ನಿಯಮವನ್ನು ಮಾಡತಕ್ಕದ್ದಲ್ಲ ಎಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು, ಸಂದರ್ಭಕ್ಕೆ ತಕ್ಕಂತೆ, ಅಂಥ ಮಾರ್ಪಾಡು ಮಾಡಿದ ರೂಪದಲ್ಲಿ ಮಾತ್ರ ಜಾರಿಯಲ್ಲಿರುತ್ತದೆ ಅಥವಾ ವರ್ಜಿತವಾಗುತ್ತದೆ; ಆದ್ದರಿಂದ, ಆದಾಗಿಯೂ, ಅಂಥ ಯಾವುದೇ ಮಾರ್ಪಾಡು ಅಥವಾ ವರ್ಜನೆ (annulment) ಆ ನಿಯಮದಡಿ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ (validity) ಬಾಧೆಯಿರುವುದಿಲ್ಲ.

*ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ*

**23.** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರಲು ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿನ ಅಧಿಸೂಚನೆಯ ಮೂಲಕ ಅಧಿಸೂಚನೆಗಳ ಮೂಲಕ, ನಿಯಮಗಳನ್ನು ರಚಿಸಬಹುದು.

(2) ನಿರ್ದಿಷ್ಟವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯತ್ವಕ್ಕೆ ಧಕ್ಕೆಯಿಲ್ಲದಂತೆ, ಈ ನಿಯಮಗಳು ಈ ಮುಂದಿನವುಗಳಲ್ಲಿ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಅವಕಾಶ ಮಾಡಿಕೊಡಬಹುದು:-

(ಎ) ಪ್ರಕರಣ 6 ರ ಉಪವಿಧಿ (4) ರಂತೆ ರೈತನಿಗೆ ಪಾವತಿ ಮಾಡಬೇಕಾದ ರೀತಿ ಮತ್ತು ವಿಧಾನ;

(ಬಿ) ನೋಂದಾವಣೆ ಪ್ರಾಧಿಕಾರದ ಸಂರಚನೆ, ಅಧಿಕಾರ ಮತ್ತು ಕಾರ್ಯಭಾರಗಳು ಮತ್ತು ಪ್ರಕರಣ 12 ರ ಉಪವಿಧಿ (2) ರಡಿ ನೋಂದಾವಣೆಯ ವಿಧಾನ;

(ಸಿ) ರಾಜ್ಯ ಸರಕಾರದ ನಿಯಮಗಳ ಮೂಲಕ ಉಪಬಂಧ ಕಲ್ಪಿಸಬೇಕಾದ ನಿಗದಿ ಮಾಡಬೇಕಾದ ಅಥವಾ ಮಾಡಬಹುದಾದ ಇತರ ಯಾವುದೇ ವಿಷಯ.

(3) ರಾಜ್ಯ ಸರ್ಕಾರವು ಈ ಅಧಿನಿಯಮದಡಿ ರಚಿಸಿದ ಪ್ರತಿಯೊಂದು ನಿಯಮವನ್ನೂ, ಅದನ್ನು ರಚಿಸಿದ ಮೇಲೆ ಕೂಡಲೇ, ರಾಜ್ಯದ ಶಾಸನ ಸಭೆಯ (Legislature) ಎರಡು ಸದನಗಳಿದ್ದಲ್ಲಿ, ಎರಡೂ ಸದನಗಳಲ್ಲಿ, ಅಥವಾ ಶಾಸನಸಭೆಯಲ್ಲಿ ಒಂದೇ ಸದನವಿದ್ದಲ್ಲಿ ಆ ಸದನದಲ್ಲಿ ಮಂಡಿಸತಕ್ಕದ್ದು.

*ತೊಂದರೆಗಳನ್ನು ನಿವಾರಿಸುವ ಅಧಿಕಾರ*

**24.** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿ ಮಾಡುವಲ್ಲಿ ಏನೇ ತೊಂದರೆ ಉಂಟಾದಲ್ಲಿ ಆ ತೊಂದರೆಯನ್ನು ನಿವಾರಿಸಲು ಕೇಂದ್ರ ಸರ್ಕಾರವು ಈ ಅಧಿನಿಯಮದ ಉಪಬಂಧಗಳಿಗೆ ವಿರೋಧವಾಗದಿರುವ ಅಗತ್ಯವೆನಿಸಿದ ಉಪಬಂಧಗಳನ್ನು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಬಹುದು;

(2) ಈ ವಿಧಿಯಡಿ ಮಾಡಲಾದ ಪ್ರತಿಯೊಂದು ಆದೇಶವನ್ನೂ ಅದನ್ನು ಮಾಡಲಾದ ಕೂಡಲೇ ಶಾಸನ ಸಭೆಯ ಎರಡೂ ಸದನಗಳ ಮುಂದೆ ಮಂಡಿಸತಕ್ಕದ್ದು.

*2020 ರ 11ನೇ ಸುಗ್ರೀವಾಜ್ಞೆ / ರದ್ದತಿ ಮತ್ತು ಸಂರಕ್ಷಣೆ*

**25.** (1) 2020 ರ ಬೆಲೆ ಖಾತರಿ ಮತ್ತು ಕೃಷಿ ಸೇವೆಗಳನ್ನು ಕುರಿತಂತೆ ರೈತರ (ಸಬಲೀಕರಣ ಮತ್ತು ರಕ್ಷಣೆ) ಒಪ್ಪಂದ ಸುಗ್ರೀವಾಜ್ಞೆಯನ್ನು ಈ ಮೂಲಕ ರದ್ದು ಪಡಿಸಲಾಗಿದೆ.

(2) ಈ ರದ್ದತಿ ಏನೇ ಇರಲಿ, 2020 ರ ಬೆಲೆ ಖಾತರಿ ಮತ್ತು ಕೃಷಿ ಸೇವೆಗಳನ್ನು ಕುರಿತಂತೆ ರೈತರ (ಸಬಲೀಕರಣ ಮತ್ತು ರಕ್ಷಣೆ ಒಪ್ಪಂದ ಸುಗ್ರೀವಾಜ್ಞೆಯಡಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವು ಈ ಅಧಿನಿಯಮದ ಸಂಬಂಧಿತ ಉಪಬಂಧಗಳಡಿ ಮಾಡಿದ್ದೆಂದು ಅಥವಾ ಕೈಗೊಂಡಿದ್ದೆಂದು ಪರಿಗಣಿಸಲಾಗುವುದು.

ಡಾ. ಜಿ. ನಾರಾಯಣ ರಾಜು,
ಭಾರತ ಸರ್ಕಾರದ ಕಾರ್ಯದರ್ಶಿ.

---

ವ್ಯವಸ್ಥಾಪಕ, ಭಾರತ ಸರ್ಕಾರದ ಮುದ್ರಣಾಲಯ, ಮಿಂಟೋ ರಸ್ತೆ, ನವದೆಹಲಿ-110002 ಇವರು ಇಳಿಸಿಕೊಂಡು (ಅಪ್ ಲೋಡ್) ಪ್ರಕಟಣೆಗಳ ನಿಯಂತ್ರಕರು, ದೆಹಲಿ-110054 ಇವರು ಪ್ರಕಟಿಸಿದ್ದು.

MGIPMRND-857GI- 27-9-2020.